# ಆಧುನಿಕ ‘ಮಯ’ ಸದನಗಳು

ಪಾಂಡವರು ಇಂದ್ರಪ್ರಸ್ಥಕ್ಕೆ ಹೋದಾಗ ಅದು ಬೆಂಗಾಡಾಗಿತ್ತು. ಅದನ್ನು ಫಲಭರಿತ ಪ್ರದೇಶವನ್ನಾಗಿ ಮಾಡಲು ದೇವತೆಗಳು ಸಹಾಯ ಮಾಡುತ್ತಾರೆ. ಪಾಂಡವರಿಗೆ ಅತ್ಯಂತ ಸುಂದರವಾದ, ಚಮತ್ಕಾರ ಭರಿತವಾದ ಸದನವೊಂದನ್ನು ಶಿಲ್ಪಿ ‘ಮಯ’ನು ನಿರ್ಮಿಸಿಕೊಡುತ್ತಾನೆ. ಅದರೊಳಗಿನ ಕಣ್ಕಟ್ಟುಗಳು ಆದಿವಾಸಿಯೊಬ್ಬನು ದೊಡ್ಡ ಶಹರದಲ್ಲಿ ಕಕ್ಕಾವಿಕ್ಕಿಯಾಗುವಂತೆ ಎಂಥವರನ್ನು ದಿಕ್ಕು ತಪ್ಪಿಸುತ್ತಿದ್ದವು ಮತ್ತು ಅವರನ್ನು ನಗೆಪಾಟಲಿಗೆ ಗುರಿ ಮಾಡುತ್ತಿದ್ದವೆಂದು ಮಹಾಭಾರತ ಹೇಳುತ್ತದೆ. ಅಂಥ ‘ಮಯ’ ಸದನದಲ್ಲಿ ಹಸ್ತಿನಾವತಿಯ ಯುವರಾಜ ಸುಯೋಧನ ಕಕ್ಕಾವಿಕ್ಕಿಯಾಗಿ ದ್ರೌಪದಿಯ ನಗೆಗೆ ಗುರಿಯಾಗಿ ಅವಮಾನಿತನಾಗುತ್ತಾನೆ. ಅದೇ ಮುಂದೆ ಜೂಜಿನ ಪ್ರಸಂಗಕ್ಕೆ ಕಾರಣವಾಗಿ, ದ್ರೌಪದಿಯ ಮಾನಾಪಹರಣದಂಥ ಹೀನ ಕೃತ್ಯಕ್ಕೂ ಕಾರಣವಾಗುತ್ತದೆ.

ದ್ರೌಪದಿಯ ನಗೆಯೊಂದೇ ದುರ್ಯೋಧನನಲ್ಲಿ ಪಾಂಡವರ ಮೇಲಿನ ದ್ವೇಷವನ್ನು ಇಮ್ಮಡಿಗೊಳಿಸಿತೆಂದು ಬಗೆಯುವುದು ತಪ್ಪಾಗುತ್ತದೆ. ಇಂದ್ರಪ್ರಸ್ಥದಲ್ಲಿ ಅವನು ಕಂಡ ಪಾಂಡವರ ಸಂಪತ್ತು, ವೈಭವ ಅವನಲ್ಲಿ ಲೋಭವನ್ನು, ಆಸೆಯನ್ನು ಉಂಟು ಮಾಡುತ್ತದೆ. ಆದರೆ ಪಾಂಡವರ ಮೇಲೆ ಯುದ್ಧ ಮಾಡಿ ಅವರ ರಾಜ್ಯ ಕೋಶಗಳನ್ನು ವಶಪಡಿಸಿಕೊಳ್ಳುವುದು ದುಸ್ಸಾಧ್ಯವೆಂದು ಅವನಿಗೆ ತಿಳಿದಿತ್ತು. ಅದಕ್ಕೆ ಅವನು ಅಡ್ಡ ದಾರಿಯನ್ನು ಹಿಡಿದನು. ದ್ಯೂತವನ್ನು ಆಡಿ ಅವರ ದೇಶ ಕೋಶವನ್ನು ಕಬಳಿಸಿ, ಅವರನ್ನು ವನವಾಸಕ್ಕೆ ಕಳಿಸಿದ. ಇದಕ್ಕೆಲ್ಲಾ ಒಂದು ಪ್ರಮುಖ ನೆಪ ‘ಮಯ’ ನಿರ್ಮಿತ ಸದನ!

ಇಂದಿನ ವರ್ತಮಾನದ ಆಧುನಿಕತೆಯ ಶ್ರೀಮಂತಿಕೆಯನ್ನು ಮೆರೆಯುತ್ತಿರುವ, ಶ್ರೀಮಂತವರ್ಗ ಕಲಿಯುವ ಪಾಠ ಈ ಮಯ ಸದನದ ಪ್ರಸಂಗದಲ್ಲಿ ಧ್ವನಿತವಾಗುತ್ತದೆ. ನಮ್ಮ ಪ್ರಾಚೀನ ಗ್ರಾಮ ಸಂಸ್ಕೃತಿಯಲ್ಲಿಯೇ ಏಕೆ, ಆ ಕಾಲದ ನಗರಗಳಲ್ಲೂ ಶ್ರೀಮಂತ ಸದನಗಳು ಖಂಡಿತವಾಗಿ ಅಪರೂಪವಾಗಿದ್ದವು. ರಾಜನ ಅರಮನೆ ಅಥವಾ ಜಮೀನ್ದಾರನ ದೊಡ್ಡ ಮಣ್ಣಿನ ವಾಡೆಗಳು ಮಾತ್ರ ಅಲ್ಲೊಂದು ಇಲ್ಲೊಂದು ಕಾಣಿಸಿಕೊಳ್ಳುತ್ತಿದ್ದವು. ಅವುಗಳನ್ನು ಹೊರತು ಪಡಿಸಿದರೆ ಇಡೀ ಗ್ರಾಮ ಅಥವಾ ನಗರ ಸಮಾನವಾದ ಗೃಹ ಸೌಲಭ್ಯವನ್ನೂ ಸಾಮ್ಯತೆಯನ್ನೂ ರೂಢಿಸಿಕೊಂಡಿತ್ತು. ಬಡವ–ಶ್ರೀಮಂತರ ನಡುವೆ ಅಡುಗೆ ಮನೆಯ ಪರಿಕರಗಳಲ್ಲಿ ಆಹಾರ ಅಭ್ಯಾಸದಲ್ಲಿ ಅಂಥ ವ್ಯತ್ಯಾಸವಿರುತ್ತಿರಲಿಲ್ಲ. ಹೀಗಾಗಿ ಪರಸ್ಪರ ಅಸೂಯೆ–ದ್ವೇಷಗಳ ಪ್ರಮಾಣ ಅತ್ಯಂತ ಕಡಿಮೆಯಲ್ಲಿರುತ್ತಿತ್ತು. ಅದು ಆರ್ಥಿಕ ಕಾರಣಗಳಿಗಿಂತ ಮಿಗಿಲಾಗಿ ವೈಯಕ್ತಿಕ ರಾಗ ದ್ವೇಷಾದಿಗಳ ನೆಲೆಯಲ್ಲಿ ಮೆರೆದಾಡುತ್ತಿತ್ತು. ಬಡವ–ಶ್ರೀಮಂತರ ನಡುವೆ ಶೋಷಕ–ಶೋಷಿತ ವಿಕಲ್ಪಗಳು ಇದ್ದರೂ ಅವು ಅನೇಕ ಸಂದರ್ಭದಲ್ಲಿ ಮೌಢ್ಯ, ಜನ್ಮಾಂತರ ಕರ್ಮಫಲ ಅಥವಾ ಹಣೆಹರಹಗಳ ನಂಬಿಕೆಯಡಿ ಮರೆಯಾಗಿ ಬಿಡುತ್ತಿದ್ದವು. ಒಬ್ಬ ಚೆನ್ನಾಗಿ ಬಾಳಿ ಬದುಕುತ್ತಿದ್ದರೆ ಅದು ಹಿಂದಿನ ಜನ್ಮದಲ್ಲಿ ಮಾಡಿದ ಪುಣ್ಯದ ಫಲವೆಂದೂ, ತೊಂದರೆ ಅನುಭವಿಸಿದರೆ ಅದು ಆ ಜನ್ಮದಲ್ಲಿ ಮಾಡಿದ ಪಾಪದ ಫಲವೆಂದೂ ಸುಮ್ಮನೆ ನಂಬಿ ಬಿಸಿಯುಸಿರು ಬಿಡುತ್ತಿದ್ದರು.

ಆದರೆ ಆಧುನಿಕ ಹಳ್ಳಿಗಳ ಮತ್ತು ನಗರಗಳ ಗೃಹ ಸಾಮ್ಯತೆಯ ಅಂತರ ಹೆಚ್ಚಿ, ಜೀವನ ಶೈಲಿಗಳ ರೀತಿ ರಿವಾಜುಗಳು ಭಿನ್ನ ಸ್ವರೂಪ ಪಡೆಯುತ್ತಿವೆ. ಸಾಮಾನ್ಯ ಹಳ್ಳಿಗಳಲ್ಲೂ ಆಧುನಿಕ ‘ಮಯ’ ಸದನಗಳು ತಲೆ ಎತ್ತಿನಿಂತಿವೆ. ಅದೂ ಒಂದು ಅಥವಾ ಎರಡಲ್ಲ. ಅಂಥ ಅನೇಕ ಸದನಗಳು ನಗರದ ನವನಾಗರಿಕತೆಗೆ ಸರಿಸಾಟಿಯಾಗಿ ತಲೆ ನಿಮಿರಿಸಿ ನಿಂತಿವೆ. ಆದರೆ ಅವುಗಳ ಪಕ್ಕದಲ್ಲಿ ಹೆಂಚಿನ ಮನೆಗಳೂ, ಗುಡಿಸಲುಗಳು ಅಪಶಕುನದಂತೆ ದುಃಖಿಸುತ್ತಿರುವುದು, ಪರಿತಪಿಸುವುದು ಅತಿಯಾಗತೊಡಗಿದೆ. ನಗರಗಳಲ್ಲಂತೋ ಇಂಥ ‘ಮಯ’ಗಳು ಬಡಾವಣೆ ಬಡಾವಣೆಗಳಾಗಿ ನಿರ್ಮಿತಗೊಂಡು, ತಮ್ಮ ಪಕ್ಕದಲ್ಲಿ ಸೇವೆಗೆಂದು ವ್ಯವಸ್ಥಿತವಾಗಿ ಕೊಳಗೇರಿಗಳನ್ನು ಜೋಪಾನವಾಗಿ ಕಾಯ್ದಿರಿಸಿಕೊಂಡಿವೆ.

ಆದರೆ ಈಗ ಹಳೆಯ ಕಾಲದಂತಿಲ್ಲ. ಆಲೋಚನಾ ವಿಧಾನಗಳು ಬದಲಾಗಿವೆ. ಕರ್ಮಫಲ, ಪಾಪ–ಪುಣ್ಯ ಪರಿಕಲ್ಪನೆಗಳು ಜನಮನದ ಆಂತರ್ಯದಲ್ಲಿ ಇನ್ನೂ ಜೀವಂತವಾಗಿದ್ದರೂ ಅವುಗಳ ಬಗೆಗಿನ ಹೆದರಿಕೆ ಕಡಿಮೆಯಾಗಿದೆ. ಅದಕ್ಕೆ ಮೂಲ ಕಾರಣ– ವರ್ತಮಾನದ ಆಲೋಚನಾ ವಿಧಾನಗಳು. ಆಧುನಿಕ ಬದುಕಿನ ಭೋಗಲಾಲಸೆ ವ್ಯಕ್ತಿಯ ಜೀವನ ಗತಿಯನ್ನು ನಿರ್ಧರಿಸತೊಡಗಿದೆ. ನಗರ ಮತ್ತು ಗ್ರಾಮೀಣ ಬದುಕಿನಲ್ಲಿ ಹೆಜ್ಜೆ ಹೆಜ್ಜೆಗೂ ತಲೆ ಎತ್ತುತ್ತಿರುವ ‘ಮಯ’ ಸದನಗಳು ಸಾಮಾನ್ಯರನ್ನು ಅತೃಪ್ತಿಯ ಕಡೆಗೆ, ಈರ್ಷೆಯ ಕಡೆಗೆ ತುಡಿಸುತ್ತಿವೆ. ಇದಕ್ಕೆ ಮುಖ್ಯ ಕಾರಣ ಈ ಆಧುನಿಕ ‘ಮಯ’ ಸದನಗಳು ಪಾಂಡವರಿಗೆ ದಕ್ಕಿದ ಹಾಗೆ– ಪವಾಡ ಸ್ವರೂಪದವಲ್ಲ. ಅವು ಅಕ್ರಮವಾಗಿ, ವಂಚನೆಯಿಂದ, ಶೋಷಣೆಯಿಂದ ಸಂಪಾದಿಸಿದ ಹಣದಿಂದ ನಿರ್ಮಿತವಾದಂಥವು.

ಶ್ರೀಮಂತರು ಬದುಕುತ್ತಿರುವ ಈ ಭೋಗ ಜೀವನ ವಿಧಾನವು ತಮಗೆ ದಕ್ಕಬೇಕಾದ ಸಂಪತ್ತಿನಿಂದ ಅನುಭವಿಸುತ್ತಿರುವುದು ಎಂದು ಬಡ ಬಗ್ಗರು–ಶೋಷಿತರು ಅರ್ಥ ಮಾಡಿಕೊಂಡುಬಿಟ್ಟಿದ್ದಾರೆ! ಈ ತಿಳಿವಳಿಕೆಯನ್ನು ತಪ್ಪು ಎಂದು ನಿರ್ದಾಕ್ಷಿಣ್ಯವಾಗಿ ಹೇಳುವುದು ಆತುರದ ಮಾತಾದೀತು. ಇದರ ಬಗ್ಗೆ ಇಂದು ಸಮಾಜ ಗಂಭೀರವಾಗಿ ಚಿಂತಿಸಿ ಹೆಜ್ಜೆ ಇಡಬೇಕಾಗಿದೆ. ಇಲ್ಲದಿದ್ದಲ್ಲಿ ಮುಂದೆ ಸಂಭವಿಸಬಹುದಾದ ಅಪಾಯ ತಪ್ಪುವುದಿಲ್ಲ.

■ ಶಿಕಾಕು

## ಮಾತೇ ಮುತ್ತು

★ ಉತ್ತಮ ಸಲಹೆಗಳನ್ನು ಜನರು ನಿರ್ಲಕ್ಷಿಸುವುದೇ ಹೆಚ್ಚು, ಹಾಗೆಂದು ಸಲಹೆಗಳನ್ನು ಕೊಡದೇ ಇರಬಾರದು.

–ಅಗಾಥಾ ಕ್ರಿಸ್ಟಿ

★ ಯಾವುದೋ ಒಂದು ಮುಹೂರ್ತದಲ್ಲಿ ಒಳ್ಳೆಯ ಅವಕಾಶ ನಮ್ಮಲ್ಲಿಗೆ ಬರುತ್ತದೆ. ಅದನ್ನು ಸದುಪಯೋಗ ಪಡಿಸಿಕೊಳ್ಳದಿದ್ದರೆ ಅದು ಮತ್ತೆ ಬರುವುದು ಅನುಮಾನ.

–ಕಾರ್ಲೈಲ್

★ ಕೋಳಿ ಒಂದು ಮೊಟ್ಟೆಯನ್ನಿಟ್ಟು ನಕ್ಷತ್ರಕ್ಕೆ ಜನ್ಮ ನೀಡಿದೆ ಎನ್ನುವಂತೆ ಕುಣಿದಾಡುತ್ತದೆ.

–ಮಾರ್ಕ್‌ಟ್ವೇನ್

★ ಪಶ್ಚಾತ್ತಾಪ ಪಡದೆ, ಅದರ ಫಲವನ್ನು ಅನುಭವಿಸುವಂಥ ಕೆಲಸವನ್ನು ಮಾಡಬೇಕು.

–ಗೌತಮ ಬುದ್ಧ

★ ಚಾರಿತ್ರ್ಯ ಎಂಬುದು ಒಂದು ವೃಕ್ಷವಿದ್ದಂತೆ. ಪ್ರಖ್ಯಾತಿ, ಯಶಸ್ಸು ಎಂಬುದು ನೆರಳಿದ್ದಂತೆ. ಮರ(ವೃಕ್ಷ)ವಷ್ಟೇ ವಾಸ್ತವ, ನೆರಳು ವಾಸ್ತವವಲ್ಲ.

–ಅಬ್ರಾಹಂ ಲಿಂಕನ್

★ ಕೇವಲ ಆಡಳಿತ ನಡೆಸುವವರ ಬಳಿಯೇ ಕಾನೂನು ಇದ್ದರೆ, ಆ ಕಾನೂನು ಶೀಘ್ರ ಹಾಳಾಗುತ್ತದೆ.

–ಹರ್ಬರ್ಟ್ ಹೂವರ್

★ ಪ್ರಾಮಾಣಿಕ ಮನುಷ್ಯ ಮಾತ್ರ ಸ್ವಾತಂತ್ರ್ಯವನ್ನು ಪ್ರೀತಿಸಬಲ್ಲ. ಉಳಿದವರು ಸ್ವಾತಂತ್ರ್ಯವನ್ನಲ್ಲ, ಸ್ವಚ್ಛಂದತೆಯನ್ನು ಮಾತ್ರ ಪ್ರೀತಿಸುವರು.

–ಭಗತ್‌ಸಿಂಗ್

★ ಬಾಲ್ಯದಲ್ಲಿ ಕಲಿತದ್ದೇ ಬದುಕಿನಲ್ಲಿ ಉಳಿಯುವುದರಿಂದ ಮಕ್ಕಳಿಗೆ ಕನ್ನಡ ಸಂಸ್ಕಾರ ಕಲಿಸಬೇಕು.

–ಚೆನ್ನವೀರ ಕಣವಿ

★ ಕೋಪಗೊಳ್ಳುವುದೆಂದರೆ ಇನ್ನೊಬ್ಬರ ತಪ್ಪನ್ನು ತನ್ನ ಮೇಲೆ ಎಳೆದುಕೊಂಡಂತೆ.

–ಪೋಪ್

★ ವ್ಯಕ್ತಿಯೊಬ್ಬ ತನ್ನ ಧರ್ಮವನ್ನು ಹೇಳಿಕೊಳ್ಳುವುದು ತಪ್ಪಲ್ಲ. ಜತೆಗೆ ಆತ ಸರ್ವಧರ್ಮ ಸಹಿಷ್ಣುವೂ ಆಗಿರಬೇಕು.

–ಎಂ.ಜೆ.ಅಕ್ಬರ್

★ ಮನುಷ್ಯ ನಿರಾಸೆ, ನೋವುಗಳನ್ನು ತನ್ನ ಬದುಕಿನ ಒಂದು ಭಾಗವೆಂದು ತಿಳಿದರೆ ಸಂತೋಷದಿಂದ ಇರಬಲ್ಲ.

–ಶಂ.ಬಾ.ಜೋಷಿ